ಗಾಂಧಿನಗರ ಪೋಸ್ಟ್

# ಕೆಚ್ಚು ಹುಮ್ಮಸ್ಸಿನ ಟಗರು!

**ಕ್ರಿಯಾಶೀಲತೆಯ ಹಿನ್ನೆಲೆಯಲ್ಲಿ ಟಗರು ಎನ್ನುವ ವಿಶೇಷಣ ನಟ ಶಿವಣ್ಣನಿಗೂ ನಿರ್ದೇಶಕ ಸೂರಿಗೂ ಅನ್ವಯಿಸುತ್ತದೆ. ಇಬ್ಬರ ಜೋಡಿಯ ‘ಟಗರು’ ಗಾಂಧಿನಗರದಲ್ಲಿ ಗುಟುರು ಹಾಕುತ್ತಿದೆ.**

■ ರಘು

ಟಗರು ಹುಮ್ಮಸ್ಸಿಗೆ ಹಾಗೂ ಕೆಚ್ಚಿಗೆ ಹೆಸರುವಾಸಿ. ಈ ವಿಶೇಷಣಗಳಿಗೆ ಕನ್ನಡ ಚಿತ್ರರಂಗದಲ್ಲಿ ಹೆಸರಾದವರು ಶಿವರಾಜ್ ಕುಮಾರ್. ಈ ಸಾಮ್ಯತೆಯಿಂದಲೇ ಇರಬೇಕು – ನಿರ್ದೇಶಕ ಸೂರಿ ತಮ್ಮ ಚಿತ್ರವನ್ನು ‘ಟಗರು’ ಎಂದು ಹೆಸರಿಸಿದ್ದಾರೆ. ‘ಮೈಯೆಲ್ಲ ಪೊಗರು’ ಎನ್ನುವ ಚಿತ್ರದ ಅಡಿಶೀರ್ಷಿಕೆಯನ್ನು, ಅಹಂ ಎನ್ನುವ ಬದಲಿಗೆ ಆತ್ಮವಿಶ್ವಾಸ ಎಂದು ಹೇಳಬಹುದು.

ಸದ್ಯಕ್ಕೆ ಚಿತ್ರಮಂದಿರಗಳ ಹೊಸ್ತಿಲಲ್ಲಿರುವ (ಫೆ. 23ರಂದು ತೆರೆಗೆ) ಟಗರಿನ ಗುಟುರು ಗಾಂಧಿನಗರದಲ್ಲೆಲ್ಲ ಅನುರಣಿಸುತ್ತಿದೆ. ಇದಕ್ಕೆ ಕಾರಣವೂ ಇದೆ. ಮೊದಲನೇ ಕಾರಣ, ಶಿವಣ್ಣ ಹಾಗೂ ಸೂರಿ ಕಾಂಬಿನೇಷನ್. ಈ ಮೊದಲು ಇಬ್ಬರೂ ಒಟ್ಟಾಗಿ ಕೆಲಸ ಮಾಡಿದ್ದ ‘ಕಡ್ಡಿಪುಡಿ’ ಚಿತ್ರರಸಿಕರ ಗಮನಸೆಳೆದಿತ್ತು. ಶಿವಣ್ಣನ ಲವಲವಿಕೆಯ ಅಭಿನಯದ ಜೊತೆಗೆ, ಚಿತ್ರದ ತಾಂತ್ರಿಕ ಉತ್ಕೃಷ್ಟತೆ ‘ಕಡ್ಡಿಪುಡಿ’ಯ ಹೊಳಪು ಹೆಚ್ಚಿಸಿದ್ದವು. ಟಗರು ಕೂಡ ತಾಂತ್ರಿಕವಾಗಿ ಉತ್ತಮವಾದ ಸಿನಿಮಾ ಎನ್ನುತ್ತಿದೆ ಚಿತ್ರತಂಡ.

ಶಿವಣ್ಣ ಲಾಂಗ್ ಹಿಡಿದ ಸಿನಿಮಾಗಳು ಸೋತಿರುವ ಉದಾಹರಣೆ ಕಡಿಮೆ. ‘ಟಗರು’ ಕೂಡ ಭೂಗತ ಜಗತ್ತಿನ ಜೊತೆ ತಳುಕು ಹಾಕಿಕೊಂಡಿರುವ ಕಥೆಯನ್ನೊಳಗೊಂಡಿದೆ. ಈ ಕಥೆಯಲ್ಲೊಂದು ವಿಶಿಷ್ಟ ಫೀಲ್ ಇದೆಯಂತೆ.

ಶಿವಣ್ಣರ ಹಿಂದಿನ ಸಿನಿಮಾ ಮಫ್ತಿಯಲ್ಲಿನ ಅವರ ಪಾತ್ರ ಅಭಿಮಾನಿಗಳಿಗೆ ಇಷ್ಟವಾಗಿತ್ತು. ಮಾತಿಗಿಂತಲೂ ಹೆಚ್ಚಾಗಿ ಕಣ್ಣಿನ ಕದಲಿಕೆಗೆ ಹೆಚ್ಚಿನ ಅವಕಾಶವಿದ್ದ ಚಿತ್ರವದು. ಸೂರಿ ಅವರ ಚಿತ್ರಗಳನ್ನು ನೋಡಿದವರು, ‘ಟಗರು’ ಚಿತ್ರದಲ್ಲಿ ಕೂಡ ನಾಯಕನ ಅಭಿನಯ ಪ್ರತಿಭೆಗೆ ಹೆಚ್ಚಿನ ಅವಕಾಶ ಇರುತ್ತದೆಂದು ಸ್ಪಷ್ಟವಾಗಿ ಹೇಳಬಹುದು.

ಸೂರಿ ಅವರ ಚೊಚ್ಚಿಲ ಸಿನಿಮಾ ‘ದುನಿಯಾ’ ತೆರೆ ಕಂಡ ಫೆ. 23ರಂದೇ ‘ಟಗರು’ ಕೂಡ ಬಿಡುಗಡೆಯಾಗುತ್ತಿದೆ. ‘ದುನಿಯಾ’ ತೆರೆ ಕಂಡ ಒಂದು ದಶಕದ ನಂತರವೂ ಸೂರಿ ತಮ್ಮ ಚಾರ್ಮ್ ಹಾಗೂ ಫಾರ್ಮ್ ಉಳಿಸಿಕೊಂಡಿರುವುದು ಕಡಿಮೆ ಸಾಧನೆಯೇನಲ್ಲ.

‘ಟಗರು’ ಸಿನಿಮಾದ ಗೀತೆಗಳು ದೊಡ್ಡ ಮಟ್ಟದಲ್ಲಿ ಜನಪ್ರಿಯತೆ ಗಳಿಸಿರುವುದು ಕೂಡ ನಿರೀಕ್ಷೆಗಳನ್ನು ಹೆಚ್ಚಿಸಿದೆ. ಚರಣ್ ರಾಜ್ ಸಂಗೀತ ಸಂಯೋಜನೆಯಲ್ಲಿನ ಗೀತೆಗಳಲ್ಲಿ ಯುವಜನರನ್ನು ಹುಚ್ಚೆಬ್ಬಿಸುವ ಸೆಳೆತವಿದೆ. ಏಕತಾನತೆಯ ಗೀತೆಗಳನ್ನು ಕೇಳಿ ಜಡಗಟ್ಟಿದವರನ್ನು ಚರಣ್‌ರ ಗೀತೆಗಳ ಲವಲವಿಕೆ ಸೆಳೆಯಬಲ್ಲದು.

ಮಾನ್ವಿತಾ ಹರೀಶ್ ಚಿತ್ರದ ಇನ್ನೊಂದು ಆಕರ್ಷಣೆ. ಸೂರಿ ಅವರ ‘ಕೆಂಡಸಂಪಿಗೆ’ಯ ಈ ಚೆಲುವೆಗೆ ಮತ್ತೊಂದು ಸಶಕ್ತ ಪಾತ್ರದಲ್ಲಿ ಕಾಣಿಸಿಕೊಂಡಿರುವ ಖುಷಿ. ಭಾವನಾ, ಧನಂಜಯ್ ಹಾಗೂ ವಸಿಷ್ಠ ತಾರಾಗಣದಲ್ಲಿರುವ ಪ್ರಮುಖರು.

‘ಟಗರು’ ಬೆನ್ನಿಗೆ ‘ಟಗರು–2’ ಚಿತ್ರ ಕೂಡ ತಯಾರಾಗಲಿದೆ ಎನ್ನುವ ಸುದ್ದಿ ಚಿತ್ರರಂಗದಲ್ಲಿದೆ. ಇದೆಲ್ಲವೂ ಪ್ರಚಾರದ ಭಾಗವಾಗಿ ಸಿನಿಮಾದ ಕುರಿತ ನಿರೀಕ್ಷೆಗಳು ಹೆಚ್ಚಲು ಕಾರಣವಾಗಿದೆ. ‘ಟಗರು’ ನಂತರ ದೊಡ್ಡ ಬಜೆಟ್ ಸಿನಿಮಾಗಳು ತೆರೆಕಾಣುವ ತವಕದಲ್ಲಿವೆ. ಅನೂಪ್ ಭಂಡಾರಿ ನಿರ್ದೇಶನದ ‘ರಾಜರಥ’, ದರ್ಶನ್ ಅಭಿನಯದ ‘ಕುರುಕ್ಷೇತ್ರ’ಗಳು ತೆರೆ ಕಾಣುವ ಸಿದ್ಧತೆ ನಡೆಸಿವೆ. ‘ಟಗರು’ ಸಿನಿಮಾ ಗೆದ್ದರೆ, ಮುಂದಿನ ಸಿನಿಮಾಗಳ ಬಿಡುಗಡೆಗೊಂದು ಒಳ್ಳೆಯ ವೇದಿಕೆ ಸಿದ್ಧವಾಗುತ್ತದೆ. ನಿರ್ದೇಶಕ ಸೂರಿ ಕೂಡ ತಮ್ಮ ಸ್ವಂತ ನಿರ್ಮಾಣದ ‘ಕಾಗೆಬಂಗಾರ’ ರೂಪಿಸುವ ಸಿದ್ಧತೆಯಲ್ಲಿದ್ದಾರೆ. ಹಾಗಾಗಿ, ಈ ಸಿನಿಮಾದ ಯಶಸ್ಸು ಅವರಿಗೆ ಮುಖ್ಯವಾದುದು. ■

